# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/123/2014-15 ದಿ:16-05-2016

| ವಾದಿಗಳು | ವಿರುದ್ದ | ಪ್ರತಿವಾದಿಗಳು |
|---|---|---|
| 1.ಕೆ.ಭೀಮರೆಡ್ಡಿ ತಂದೆ ನಾಗಿರೆಡ್ಡಿ | ---------------------------- | ಪಂಪಾಪತಿ ತಂದೆ ಕಟ್ಟೇಬಸಪ್ಪ |
| 2.ಸಿದ್ದಮ್ಮನಹಳ್ಳಿ ಬಿಳಿಬಾಯಪ್ಪ ತಂದೆ ದೊಡ್ಡಪ್ಪ. ಕರೂರು ಗ್ರಾಮ. | | ಗೌಡರ ಪೇಟೆ. ಕರೂರು ಗ್ರಾಮ. |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕರೂರು | 574/ಐ ಪೈಕಿ | 2-73 | ಖುಷ್ಕಿ |

ಆದೇಶ:-

ಸಿರುಗುಪ್ಪ ತಾಲೂಕು ಕರೂರು ಗ್ರಾಮದ ಸ,ನಂ.574/ಐ ವಿ:3-58 ಎಕ್ರೆಯಲ್ಲಿ ವಿ:2-73 ಎಕ್ರೆ ಜಮೀನನ್ನು ನೋಂದಣಿ ಕ್ರಯಪತ್ರ ಸಂಖ್ಯೆ:574/2012-13 ದಿ:30-04-2012 ರ ಪ್ರಕಾರ ಹಾಲಿ ಪಟ್ಟಾದಾರರಾದ ಸಿದ್ದಮ್ಮನಹಳ್ಳಿ ಬಿಳಿಬಾಯಪ್ಪ ತಂದೆ ದೊಡ್ಡಪ್ಪ ಇವರು ಕೆ.ಭೀಮರೆಡ್ಡಿ ತಂದೆ ನಾಗಿರೆಡ್ಡಿ ಇವರಿಗೆ ಕ್ರಮಕ್ಕೆ ಕೊಟ್ಟಿರುತ್ತಾರೆ. ಅದರಂತೆ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಕರೂರು ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಕರೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಪಂಪಾಪತಿ ತಂದೆ ಕಟ್ಟೇಬಸಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿನಾಂಕ:24-05-2012 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಕರೂರು ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:312/2011-12 ದಿ:10-06-2012 ರ ಪ್ರಕಾರ ಮೊದಲಿಗೆ ಉಪ-ತಹಶೀಲ್ದಾರರು ಕರೂರು ಇವರ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿದ್ದು, ನಂತರ ದಿ:06-02-2015 ರಂದು ಉಪ-ತಹಶೀಲ್ದಾರರು ಈ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:14-08-2015 ರಿಂದ 13-04-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ದಿ:21-03-2016 ರ ವಿಚಾರಣೆ ಸಮಯದಲ್ಲಿ ತಾವುಗಳು ರಾಜೀಯಾಗಿದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇರುವುದಿಲ್ಲವೆಂದು ಕೋರಿದ ಮೇರೆಗೆ, ಲಿಖಿತ ಹೇಳಿಕೆ ಹಾಜರುಪಡಿಸಲು ತಿಳಿಸಲಾಯಿತು.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ನಂತರ ದಿನಾಂಕ:13-04-2016 ರಂದು ವಿಚಾರಣೆಗೆ ಉಭಯತರೂ ಹಾಜರಾಗಿ, ದಿ:23-03-2016 ರಂದು ನೋಟರಿ ಸಮಕ್ಷಮ ಪ್ರತಿವಾದಿ ಪಂಪಾಪತಿ ಇವರು ಪ್ರಮಾಣೀಕರಿಸಿದ ಅಫಿಡೆವಿಟ್‌ನಲ್ಲಿ "ದಾವಾ ಜಮೀನನ್ನು ಈ ಹಿಂದೆ ತಮ್ಮ ತಂದೆ ಬಿಳಿಬಾಯಪ್ಪ ಇವರಿಗೆ ಮಾರಾಟ ಮಾಡಿದ್ದು, ತದನಂತರ ಬಿಳಿಬಾಯಪ್ಪ ಇವರು ಶೀತಾರಾಮರೆಡ್ಡಿ ಇವರಿಗೆ ಮಾರಾಟ ಮಾಡಿರುತ್ತಾರೆ. ಸದ್ರಿ ಕ್ರಯ ವ್ಯವಹಾರವು ಸರಿ ಇದ್ದು, ಖರೀದಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತನ್ನ ಯಾವ ಆಕ್ಷೇಪಣೆಗಳು ಇರುವುದಿಲ್ಲವೆಂದು, ತಾನು ಸಲ್ಲಿಸಿದ ತಕರಾರನ್ನು ಖುದ್ದುರಾಜೀಯಿಂದ ವಾಪಾಸು ಪಡೆದಿರುವುದಾಗಿ ಅಫಿಡೆವಿಟ್ ಹಾಜರುಪಡಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128, 129 ರ ಅಡಿ, ಸಿರುಗುಪ್ಪ ತಾಲ್ಲೂಕು ಕರೂರು ಗ್ರಾಮದ ಸ,ನಂ.574/ಐ ವಿ:3-58 ಎಕ್ರೆಯಲ್ಲಿ ವಿ:2-73 ಎಕ್ರೆ ಜಮೀನನ್ನು ನೋಂದಣಿ ಕ್ರಮಪತ್ರ ಸಂಖ್ಯೆ:574/2012-13 ದಿ:30-04-2012 ರ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/123/2014-15** **ದಿ:16-05-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲ್ಲೂಕು ಕರೂರು ಗ್ರಾಮದ ಸ,ನಂ.574/ಐ ವಿ:3-58 ಎಕ್ರೆಯಲ್ಲಿ ವಿ:2-73 ಎಕ್ರೆ ಜಮೀನನ್ನು ನೋಂದಣಿ ಕ್ರಮಪತ್ರ ಸಂಖ್ಯೆ:574/2012-13 ದಿ:30-04-2012 ರ ಪ್ರಕಾರ ಸಿದ್ದಮ್ಮನಹಳ್ಳಿ ಬಿಳಿಬಾಯಪ್ಪ ತಂದೆ ದೊಡ್ಡಪ್ಪ ಇವರಿಂದ ಕ್ರಯ ಹೊಂದಿದ **ಕೆ.ಭೀಮರೆಡ್ಡಿ ತಂದೆ ನಾಗಿರೆಡ್ಡಿ** ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:16-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಗೆ,
1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ